

ಎಡದಿಂದ ಬಲಕ್ಕೆ:
1. ಅವನು ಭಗೀರಥ ಹೌದು; ಆದರೆ ಕರೆಯದೇ ಬಂದನಲ್ಲ (4)
3. ಸಂಗ್ರಾಮ ತಂತ್ರಗಳು–ಸಮಸ್ತ (3)
4. ಜೀರಾಯ್ತಿ ಮಾಡುವವನದು ತಾವರೆಯದೇ ಹೆಸರು (3)
6. ಅಂಥ ಶಕ್ತಿ ಬರಿಸಿದ್ದೇ ರಾಷ್ಟ್ರಪ್ರೇಮ (4)
7. ಮರಣ ಭೀತಿಯನ್ನೂ ಮೀರಿಸುತ್ತದೆ ಸಾಲದ ಹೆದರಿಕೆ (4)
9. ಎಂಥ ಕಲ್ಲನ್ನೂ ಕೊರೆಯುವ ಕುಶಲ ವಿದ್ಯಾವಂತ (4)
12. ಹೊಸ ಕಾಲಕ್ಕೆ ತಕ್ಕಂತಿದೆ, ನಗು ಬರಿಸುವ ಕಥಾನಕ (4)
14. ಚಂದ ಇರುವುದು ಹೌದು, ಈ ಹೊದಿಕೆ, ದುಪ್ಪಟಿ (3)
15. ಗುಡಿಯಲ್ಲಿ ಗುರುವನ್ನೂ ತೋರಿದ ಯಕ್ಷಿಣಿ (3)
16. ಹೆಂಗಳೆಯರ ಸಂಭ್ರಮಕ್ಕೆ ಕಾರಣ ಪ್ರಾಚೀನ ವೃಕ್ಷ (4)

ಮೇಲಿನಿಂದ ಕೆಳಕ್ಕೆ:
1. ಆಗ್ರಾದ ಅಕ್ಕಪಕ್ಕ ತಿರುಗಿ ಬಂದವರದು ಇಲ್ಲಿ ಮೊದಲ ಸಾಲು (4)
2. ತೊಗರಿ ಬೆಳೆವ ಕ್ರಮದಲ್ಲೂ ವಿಧ ವಿಧ ಇದೆ (4)
3. ಅಸದೃಶವೇನಲ್ಲ. ಅಳತೆಯ ಜೊತೆಗೆ ದಿಕ್ಕೂ ಇದೆ ಅಷ್ಟೆ (3)
5. ಬೇಲಿ ಹಾರುವ ವ್ಯಕ್ತಿಯೇ ಆಕೆಯ ಗಂಡ (3)
6. ಅವರದ್ದೇ ಕಲ್ಪನೆಯ ದೇವತಾ ಪ್ರಪಂಚ (4)
8. ಶೇಂಗಾವನ್ನು ಯಥೇಚ್ಛ ಬೆಳೆದದ್ದು ವಿಜಯದ ಕಥೆ (4)
10. ವಂಚನೆ ಏನೂ ಇಲ್ಲ– ಅದು ಪರಿಮಳದ ಬೇರು (3)
11. ಹಸಿರಿಗೆ ಮೂಲವಾದ ಭೂಮಿಯಲ್ಲಿ ಹುಟ್ಟಿದ್ದೇ ಸಹಸ್ರಾರು ಗಿಡ–ಮರ (4)
12. ಅಷ್ಟೂ ಹುಡುಗರ ನಡುವೆ ಒಬ್ಬನೇ ಗಾಯಕ (4)
13. ಕಂಡಿರಾ ಅಲ್ಲಿ, ಕಂಬಳಿ ಹೊದ್ದ ಪ್ರಾಣಿ (3)

### ಪದಬಂಧ 20–12–2012 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅವಿಶ್ವಾಸ; 3. ಸಂಬಂಧ; 4. ದಶಕ; 6. ಮತಿಹೀನ; 7. ಅಂತಿಮ; 9. ಕನಕ; 11. ಕೆರಳು; 13. ಶರಣ; 15. ಅನಾಯಾಸ; 17. ತಳಿರು, 18. ರಮಿಸು– 19. ಹುರಿಯಾಳು.

ಮೇಲಿಂದ ಕೆಳಕ್ಕೆ:

1. ಅಧಮ; 2. ಸದನ; 3. ಸಂಗಾತಿ; 5. ಕದನ; 7. ಅಂಜಿಕೆ; 8. ಮರುಳು; 9. ಕಲಶ; 10. ಕಠಿಣ; 12. ರಕ್ಷಿತ; 14. ರಚಿಸು; 15. ಅರುಹು; 16. ಸರಳು.

# ಪ್ರಶ್ನಾಂಕಣ

## ಹಾಬ್ಬಿಟ್– ಅದು ಯಾರು?

'ಹಾಬ್ಬಿಟ್'– ಅದೊಂದು ಪೂರ್ವ ಮಾನವ ಪ್ರಭೇದ. ಅದರ ವೈಜ್ಞಾನಿಕ ಹೆಸರು 'ಹೋಮೋ ಫಾರೆಸಿಯೆನ್ಸಿಸ್.' ಇಂಡೋನೇಷಿಯಾದ ಹದಿಮೂರು ಸಾವಿರದ ಐದುನೂರು ದ್ವೀಪಗಳ ಪೈಕಿ ಒಂದು ಪುಟ್ಟ ದ್ವೀಪವಾದ 'ಫಾರೆಸ್'ನಲ್ಲಿ ಇಸವಿ 2003ರಲ್ಲಿ ಪ್ರಪ್ರಥವಾಗಿ ಈ ಪೂರ್ವ ಮಾನವ ಪ್ರಭೇದದ ಅವಶೇಷ ಪತ್ತೆಯಾಯಿತು. ಫಾರೆಸ್ ದ್ವೀಪದಲ್ಲಿ (ಅಸ್ಥಿಪಂಜರ ರೂಪದಲ್ಲಿ) ಪತ್ತೆಯಾದ ಮಾನವ ಪ್ರಭೇದವಾದ್ದರಿಂದ ಅದಕ್ಕೆ 'ಹೋಮೋ ಫಾರೆಸಿಯೆನ್ಸಿಸ್' ಎಂಬ ಅಭಿಧಾನ. ಅದರ ಹ್ರಸ್ವನಾಮ 'ಹಾಬ್ಬಿಟ್'. ಮಾನವೇತಿಹಾಸದಲ್ಲಿ ಈ ಮನುಷ್ಯರ ಪರಮ ಸೋಜಿಗದ ಅನನ್ಯ ದಾಖಲೆಗಳು ಹಲವಾರು. ಮುಖ್ಯವಾಗಿ–

* 'ಹೋಮೋ ಸೇಪಿಯನ್'ರನ್ನು (ಎಂದರೆ ನಮ್ಮನ್ನು) ಬಿಟ್ಟರೆ ಅತ್ಯಂತ ಇತ್ತೀಚಿನವರೆಗೆ ಬದುಕಿದ್ದ ಮಾನವ ಪ್ರಭೇದ ಇದು. ಫ್ಲಾರೆಸ್ ದ್ವೀಪದಲ್ಲಿ ಈಗ್ಗೆ ಹದಿಮೂರು ಸಾವಿರ ವರ್ಷ ಹಿಂದಿನವರೆಗೂ ಈ ಜನ ವಾಸಿಸುತ್ತಿದ್ದರು.

* ಇಡೀ ಮಾನವ ವಂಶಾವಳಿಯಲ್ಲಿ ಹಾಬ್ಬಿಟ್‌ಗಳಷ್ಟು ಕುಬ್ಜ, ಗಿಡ್ಡ ಪ್ರಭೇದ ಇನ್ನಾವುದೂ ಇಲ್ಲ. ಹಾಬ್ಬಿಟ್ ಮನುಷ್ಯರಲ್ಲಿ ವಯಸ್ಕರ ಗರಿಷ್ಠ ಎತ್ತರ ಒಂದು ಮೀಟರ್ (3–1/2 ಅಡಿ) ಮೀರಿರಲಿಲ್ಲ. ಆದರೆ ಹೋಮೋ ಫ್ಲಾರೆಸಿಯೆನ್ಸಿಸ್‌ರ ಕುಬ್ಜ ಗಾತ್ರಕ್ಕೆ ಈಗಿನ 'ಪಿಗ್ಮಿ'ಗಳಲ್ಲಿರುವಂತೆ ಯಾವುದೇ ಬೆಳವಣಿಗೆಯ ವೈಚಿತ್ರ್ಯವಾಗಲೀ, ವಂಶವಾಹೀ ದೋಷವಾಗಲೀ ಕಾರಣವಾಗಿರಲಿಲ್ಲ.

* ಹಾಬ್ಬಿಟ್‌ರ ಎಲ್ಲ ಅಂಗಾಂಗಗಳೂ 'ಅಲಿಪುಟ್' ರೂಪದಲ್ಲಿದ್ದರೂ (ಅವರ ಮೆದುಳಿನದೂ ಗೋಲಿ ಗಾತ್ರ) ಆ ಮನುಷ್ಯರು ಬುದ್ಧಿವಂತರಾಗಿದ್ದರು. ಅವರು ಸಮೂಹ ಜೀವನ ನಡೆಸಿದ್ದರು ಆಯುಧಗಳನ್ನು ತಯಾರಿಸಿ, ಬೆಂಕಿಯ ಬಳಕೆಯನ್ನೂ ಅರಿತು ಗುಂಪಾಗಿಯೇ ಬೇಟೆಯನ್ನಾಡುತ್ತಿದ್ದರೂ ಕೂಡ. ಆ ವೇಳೆಗಾಗಲೇ ಧರೆಯ ಇತರ ಪ್ರದೇಶಗಳಲ್ಲಿ ಹರಡಿದ್ದ ಹೋಮೋ ಸೇಪಿಯನ್‌ರಷ್ಟೇ ಸಮರ್ಥ ಬದುಕನ್ನು ಹಾಬ್ಬಿಟ್‌ಗಳೂ ನಡೆಸುತ್ತಿದ್ದರಾದ್ದರಿಂದ ಆ ಜನ ಭಾಷಾ ಬಳಕೆಯನ್ನೂ ಕಲಿತಿದ್ದಿರಲೇಬೇಕೆಂದು ವಿದ್ವಾಂಸರು ತರ್ಕಿಸಿದ್ದಾರೆ.



* ವಾಸ್ತವ ಏನೆಂದರೆ ಆಗ್ನೇಯ ಏಷಿಯದ ಕೆಲವಾರು ಪ್ರದೇಶಗಳಲ್ಲಿ ಈಗ್ಗೆ ಇಪ್ಪತ್ತೈದು ಸಾವಿರ ವರ್ಷ ಹಿಂದಿನವರೆಗೂ ಬಾಳು ನಡೆಸಿದ್ದ 'ಹೋಮೋ ಇರೆಕ್ಟಸ್' ಪ್ರಭೇದದ ಒಂದಷ್ಟು ಜನ ಆಕಸ್ಮಿಕವಾಗಿ ಕಡಲಿಗೆ ಇಳಿದು ದಾರಿತಪ್ಪಿ ಈಗ್ಗೆ ತೊಂಬತ್ತೈದು ಸಾವಿರ ವರ್ಷ ಹಿಂದೆ ಹೇಗೋ ಫ್ಲಾರೆಸ್ ದ್ವೀಪವನ್ನು ತಲುಪಿದ್ದರು. ಆ ಪುಟ್ಟ ದ್ವೀಪದಲ್ಲಿನ ಆಹಾರದ ಅಭಾವಕ್ಕೆ ಹೊಂದಿಕೊಳ್ಳಲು ಅಲ್ಲಿನ ಆನೆಗಳೂ ಇತರ ಪ್ರಾಣಿಗಳೂ ಕುಬ್ಜ– ಗಾತ್ರಕ್ಕೆ ಇಳಿದಿದ್ದಂತೆಯೇ ಈ ಜನರೂ ಕ್ರಮೇಣ ಕುಬ್ಜ ಗಾತ್ರವನ್ನೂ ಗಿಡ್ಡ ನಿಲುವನ್ನೂ ತಳೆದಿದ್ದರು. ವಿಶಿಷ್ಟ ವಿಭಿನ್ನ ಮಾನವ ಪ್ರಣೇದವಾಗಿ ರೂಪಾಂತರಗೊಂಡಿದ್ದರು.

ಈಗ್ಗೆ ಹನ್ನೆರಡು–ಹದಿಮೂರು ಸಾವಿರ ವರ್ಷ ಹಿಂದಿನ ಸುಮಾರಿಗೆ ಫಾರೆಸ್ ಸನಿಹದಲ್ಲಿ ಸಂಭವಿಸಿದ ಪ್ರಳಯ ರೂಪದ ಜ್ವಾಲಾಮುಖಿ ಸ್ಫೋಟದಿಂದ ಹಾಬ್ಬಿಟ್ ಪ್ರಭೇದ ಅಳಿದು ಹೋಯಿತು. ಎಂಥ ದುರಂತ!

■ ಎನ್. ವಾಸುದೇವ್